ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಒ25521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

ಸಂಖ್ಯೆ:ಕವಿಪ್ರನಿನಿ/ಬಿ5ಎ/84276/18-19

ದಿನಾಂಕ: 03 SEP 2018

## ಸುತ್ತೋಲೆ

**ವಿಷಯ:** ಪತ್ರಗಳ/ಆದೇಶಗಳ ಪ್ರತಿಗಳನ್ನು ಅನಗತ್ಯವಾಗಿ ನಿಗಮ/ ವಿಸಕಂಗಳ ವಿವಿಧ ಕಛೇರಿಗಳಿಗೆ ಉಲ್ಲೇಖಿಸಿ ರವಾನಿಸುವುದನ್ನು ತಪ್ಪಿಸುವ ಬಗ್ಗೆ.

---

ಇತ್ತೀಚಿನ ದಿನಗಳಲ್ಲಿ ರಾಜ್ಯಾದ್ಯಂತ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವಿವಿಧ ಕಛೇರಿಗಳು ದಿನನಿತ್ಯದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಜಾರಿಗೊಳಿಸುವ ಹಲವು ಅಧಿಕೃತ ಜ್ಞಾಪನಾ ಪತ್ರಗಳು, ಸುತ್ತೋಲೆಗಳು, ಆದೇಶಗಳು, ಅಧಿಕಾರಿಗಳ ಹಸ್ತಾಂತರ ವರದಿಗಳ ಹಾಗೂ ಇತರೆ ಕಛೇರಿಗಳೊಂದಿಗೆ ವ್ಯವಹರಿಸುವ ಪತ್ರಗಳ ಪ್ರತಿಗಳನ್ನು ಅಗತ್ಯತೆಯಿಲ್ಲದಿದ್ದರೂ ಸಹ, ಕವಿಪ್ರನಿನಿಯ ನಿಗಮ ಕಾರ್ಯಾಲಯವು ಸೇರಿದಂತೆ ಹಲವಾರು ಕಛೇರಿಗಳಿಗೆ ಮಾಹಿತಿಗಾಗಿ ಎಂದು ಉಲ್ಲೇಖಿಸಿ ಕಳುಹಿಸುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿಯಲ್ಲಿ ಪ್ರತಿಗಳನ್ನು ರವಾನಿಸಲು ಸಂಬಂಧಿಸಿದ ಕಛೇರಿಗಳು ಹೆಚ್ಚುವರಿ ಅಂಚೆ ವೆಚ್ಚ ಹಾಗೂ ಲೇಖನ ಸಾಮಗ್ರಿ ವೆಚ್ಚವನ್ನು ಭರಿಸುವುದರ ಜೊತೆಗೆ, ಸದರಿ ಪ್ರತಿಗಳನ್ನು ಸ್ವೀಕರಿಸುವ ಸಂಬಂಧಿಸಿದ ಕಛೇರಿಗಳ ಸ್ವೀಕೃತಿ ವಿಭಾಗಗಳ ಸಿಬ್ಬಂದಿ ಹಾಗೂ ಸ್ವೀಕರಿಸಿದ ಕಛೇರಿಯ ಎಲ್ಲಾ ಅಧಿಕಾರಿಗಳ ಅತ್ಯಮೂಲ್ಯ ಸಮಯವು ವ್ಯರ್ಥವಾಗುತ್ತಿದೆ. ಅನಾವಶ್ಯಕವಾಗಿ ರವಾನಿಸಿದ ಇಂತಹ ಪ್ರತಿಗಳ ವಿಷಯದಲ್ಲಿ ಸಂಬಂಧಿಸಿದ ಕಛೇರಿಗಳಿಂದ ಸಹಾ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆಯಿರುವುದಿಲ್ಲ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಯಾವುದಾದರೂ ಉನ್ನತ ಕಛೇರಿಗಳು ನಿರ್ದಿಷ್ಟವಾಗಿ ಯಾವುದಾದರೂ ಪ್ರತಿಗಳನ್ನು ಮಾಹಿತಿಗಾಗಿ

ತಪ್ಪದೇ ಕಳುಹಿಸಲು ಸೂಚಿಸಿದ್ದಲ್ಲಿ ಮಾತ್ರ, ಅಂತಹ ಪ್ರತಿಗಳನ್ನು ಉಲ್ಲೇಖಿಸಿ ಸೂಚಿಸಿದ ಕಛೇರಿಗಳಿಗೆ ರವಾನಿಸುವುದು. ಇಲ್ಲದಿದ್ದ ಪಕ್ಷದಲ್ಲಿ, ಕವಿಪ್ರನಿನಿಯ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಅಧಿಕಾರಿಗಳು ತಮ್ಮ ಕಛೇರಿಯಿಂದ ದಿನನಿತ್ಯದಲ್ಲಿ ಜಾರಿಗೊಳಸುವ ಅಧಿಕೃತ ಜ್ಞಾಪನಾ ಪತ್ರಗಳ, ಸುತ್ತೋಲೆಗಳ, ಆದೇಶಗಳ, ಅಧಿಕಾರಿಗಳ ಹಸ್ತಾಂತರ ವರದಿಗಳ ಹಾಗೂ ಬೇರೆ ಕಛೇರಿಗಳೊಂದಿಗೆ ವ್ಯವಹರಿಸುವ ಪತ್ರಗಳ ಪ್ರತಿಗಳು ಯಾವ ಕಛೇರಿಗಳಿಗೆ ಮತ್ತು ಯಾವ ಕಾರಣಗಳಿಗಾಗಿ ಅವಶ್ಯತೆಯಿದೆ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ, ಅಗತ್ಯ ಕಂಡುಬರುವ ಕಛೇರಿಗಳಿಗೆ ಮಾತ್ರ ಸದರಿ ಪ್ರತಿಗಳನ್ನು ಉಲ್ಲೇಖಿಸಿ ರವಾನಿಸಲು ಸೂಚಿಸಿದೆ.

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.)
ಕವಿಪ್ರನಿನಿ.

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ ನಿರ್ದೇಶಕರು (ಹಣಕಾಸು), ಬೆವಿಸಕಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/ ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳು ಮಾಹಿತಿಗಾಗಿ:**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು. ಬೆಂಗಳೂರು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ./ಎಸ್ಕಾಂ ಪ.ಜಾ. /ಪ. ಪಂ.ಅಧಿಕಾರಿಗಳ ಸಂಘ, ಬೆಂಗಳೂರು.